ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಇದಕ್ಕೆ ಭಾಗಿಗಳಾಗುವುದಿಲ್ಲ, ಇಂಥ ವೋಟಿಂಗ್‌ನಲ್ಲಿ ಕೂಡ ಭಾಗವಹಿಸಲು ತಯಾರಿಲ್ಲ. ಈಗ ಕರೆಸಿದಂತಹ ಸಭೆ * ಎನ್ನುವಂಥ ಮಾತನ್ನು ಹೇಳಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದ್ಯಸರು ಸಭಾತ್ಯಾಗ ಮಾಡಿದರು)

MR. SPEAKER: Just a minute. I have to set the records straight... ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವ ವೇಳೆಗೆ ಕಡೆಯಲ್ಲಿ ಹೊಸ ಅಲಿಗೇಷನ್ ಮತ್ತೆ ಏನು ಮಾಡಿದ್ದಾರೆ. That will not find place in the records. I am appealing to the press also, because he was given an opportunity, he had his say and the government has replied. Again it is not open to the Hon'ble Leader of the Opposition to make fresh charges. It is not in good taste. The rule doesn't permit. So, I am giving this ruling. Nothing will find place in the records. I am once again appealing to the press also.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಜನತಾದಳದ ಶಾಸಕಾಂಗ ಪಕ್ಷದ ಸಭೆಯನ್ನು ಕರೆದು ಈ ಕಾರ್ಯಕಲಾಪಗಳನ್ನು ತಾವು ಮಾಡಿಕೊಂಡಿದ್ದರೆ ನಮ್ಮ ಅಭ್ಯಂತರವೇನು ಇರುತ್ತಿರಲಿಲ್ಲ. ಆದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಯಾರು ಬಿಟ್ಟು ಹೋಗುತ್ತಾರೋ, ಅವರನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಒಂದು ರೀತಿಯ ಚುನಾವಣಾ ಪ್ರಚಾರಕ್ಕೆ ಈ ಒಂದು ಸದನವನ್ನೇನು ದುರುಪಯೋಗ ಮಾಡಿಕೊಂಡಿದ್ದೀರಿ ಇದನ್ನು ನಾನು ಖಂಡನೆ ಮಾಡುತ್ತೇನೆ. ಇಲ್ಲಿರುವ ಬಹುತೇಕ ಜನರು ನಾಳೆ ನಾಡಿದ್ದರಲ್ಲಿ ನಿಮ್ಮ ಜೊತೆ ಇರುವುದಿಲ್ಲವೆಂಬುದು ನಿಮಗೂ ಗೊತ್ತಿದೆ. ಜನತೆಯು ಸಹ ನಿಮ್ಮ ಜೊತೆ ಇರುವುದಿಲ್ಲ. ವಿಧಾನಸಭೆಯನ್ನು ವಿಸರ್ಜನೆ ಮಾಡಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ನಿಮ್ಮ ಮನೆ ಸರಿಯಾಗಿಟ್ಟುಕೊಳ್ಳಿ, ನಿಮಗೆ ಇದೆಲ್ಲಾ ಏತಕ್ಕೆ? ಇನ್ನೊಬ್ಬರ ಬಗ್ಗೆ ನಿಮಗ್ಯಾಕೆ? ನಿಮ್ಮ ಮನೆಯನ್ನು ಸರಿಯಾಗಿಟ್ಟುಕೊಂಡು ಮಾಡಿ...

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ದೃಷ್ಟಿಯಿಂದ ಹೇಳುವುದಾದರೆ ಜನತಾದಳ ಸರ್ಕಾರದ ಅಡಳಿತದ ಕೊನೆಯ ದಿವಸ. ಮುಂದಿನ ಅಧಿವೇಶನದಲ್ಲಿ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದು ಅಧಿಕಾರ ನಡೆಸುತ್ತದೆ ಎಂದು ಹೇಳಿ ಸಭಾತ್ಯಾಗ ಮಾಡುತ್ತಿದ್ದೇವೆ.